ರೈತರಿಂದ ವರಲಕ್ಷ್ಮಿ ಬೀಜ ಖರೀದಿ ಮಾಡಿದ ದರ

281- ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಬೀಜ ನಿಗಮವು 1994-95ನೇ ಸಾಲಿನಲ್ಲಿ ಡಿಸಿಹೆಚ್. ೩೨ ಹಾಗೂ ವರಲಕ್ಷ್ಮಿ ಬೀಜವನ್ನು ರೈತರಿಂದ ಖರೀಧಿ ಮಾಡಿದ ಬೆಲೆ ಹಾಗೂ ಮರಳಿ ಮಾರಾಟ ಮಾಡಿದ ಬೆಲೆ ಎಷ್ಟು (ಪ್ರತಿ ಕೆಜಿಗೆ)

ಆ) 95-96ನೇ ಸಾಲಿನಲ್ಲಿ ಡಿಸಿಹೆಚ್. 32 ಹಾಗೂ ವರಲಕ್ಷ್ಮಿ ಬೀಜವನ್ನು ರೈತರಿಂದ ಖರೀಧಿ ಮಾಡಿದ ಬೆಲೆ ಹಾಗೂ ಮರಳಿ ರೈತರಿಗೆ ಮಾರಾಟ ಮಾಡಿದ ಬೆಲೆ ಎಷ್ಟು (ಪ್ರತಿ ಕೆಜಿಗೆ)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಕರ್ನಾಟಕ ರಾಜ್ಯ ಬೀಜ ನಿಗಮವು ಮುಂಗಾರು 1993ನೇ ಸಾಲಿನಿಂದ ಉತ್ಪಾದಿಸಲಾದ ಪ್ರಮಾಣಿತ ಸಂಕರಣ ಹತ್ತಿ ಡಿಸಿಹೆಚ್ -32ಹಾಗೂ ವರಲಕ್ಷ್ಮಿ ಹತ್ತಿ ಬಿತ್ತನ ಬೀಜವನ್ನು 1994-95ನೇ ಸಾಲಿಗೆ ಖರೀಧಿಸಿದ ಹಾಗೂ ಮಾರಾಟ ಮಾಡಿದ ಬೆಲೆಗಳ ವಿವರಗಳನ್ನು ಈ ಕೆಳಕಂಡಂತೆ ಕೊಡಲಾಗಿದೆ.

	ಪ್ರಮಾಣಿತ ಬೀಜಗಳು.	ಕೊಂಡ ಬೆಲೆ ರೂ.	ಮಾರಾಟದ ಬೆಲೆ (ರೂ. ಪ್ರತಿ ಕೆಜಿಗೆ) ರೂ.
1.	ಸಂಕರಣ ಹತ್ತಿ ಡಿಸಿಹೆಚ್-32	175	250
2.	ವರಲಕ್ಷ್ಮಿ	175	260

ಕರ್ನಾಟಕ ರಾಜ್ಯ ಬೀಜ ನಿಗಮವು 1994ರ ಮುಂಗಾರು ಹಂಗಾಮಿನಲ್ಲಿ ಉತ್ಪಾದಿಸಲಾದ ಪ್ರಮಾಣಿತ ಸಂಕರಣ ಹತ್ತಿ ಡಿಸಿಹೆಚ್. 32 ಹಾಗೂ ವರಲಕ್ಷ್ಮಿ ಬಿತ್ತನೆ ಬೀಜವನ್ನು ರೈತರಿಂದ 1995-96ನೇ ಸಾಲಿಗೆ ಖರೀಧಿಸಿ ವಿತರಣೆಗೆ ನೀಡಲಾಗಿದೆ. ನಿಗಮವು ರೈತರಿಂದ ಖರೀಧಿಸಿ ಮಾರಾಟ ಮಾಡಿದ ಬೆಲೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

	ಪ್ರಮಾಣಿತ ಬೀಜಗಳು	ಕೊಂಡಬೆಲೆ ರೂ.	ಮಾರಾಟಬೆಲೆ ರೂ. (ಪ್ರತಿ ಕೆ.ಜಿ.ಗೆ)
1.	ಸಂಕರಣ ಹತ್ತಿ ಡಿಸಿಹೆಚ್. 32	195	310 ಹಾಗೂ 360
2.	ವರಲಕ್ಷ್ಮಿ	200	350 ಹಾಗೂ 400

ಮಂಗಳೂರಿನ ಐ.ಟಿ.ಐ. ಕಟ್ಟಡದ ದುರಸ್ತಿ

684-ಶ್ರೀ ಕುಂಬ್ಳೆ ಸಂದರರಾರ್ (ಸೂರತ್ಕಲ್) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಐ.ಟಿ.ಐ ಶಿಕ್ಷಣಾಲಯದ ಕಟ್ಟಡವನ್ನು ಯಾವ ಸಾಲಿನಲ್ಲಿ ಕಟ್ಟಲಾಗಿತ್ತು?

ಆ) ಸದರಿ ಕಟ್ಟಡವು ತೀರಾ ದುರಸ್ತಿ ಸ್ಥಿತಿಯಲ್ಲಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಆ ಬಗ್ಗೆ ಕ್ರಮ ಜರುಗಿಸದೇ ಇರಲು ಕಾರಣಗಳೇನು?

ಈ) ಸದರಿ ಶಿಕ್ಷಣಾಲಯದಲ್ಲಿ ಮಳೆಗಾಲದಲ್ಲಿ ನೀರು ತುಂಬಿಕೊಂಡು ಪಾಠ ಪ್ರವಚನಗಳಿಗೆ ತೊಂದರೆಯುಂಟಾಗಿ ಶಿಕ್ಷಣ ಕಾರ್ಯವು ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಉ) ಕಟ್ಟಡದ ದುರಸ್ತಿಗಾಗಿ ಸರ್ಕಾರದವರು ಕಾಲ ನಿಗಧಿತ ಕ್ರಮ ಜರುಗಿಸುವರೆ?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು):

ಅ) 1964

ಆ) ಬಂದಿದೆ

ಇ) ಆಯವ್ಯಯದ ಕೊರತೆ ಇರುವುದರಿಂದ

ಈ) ಬಂದಿದೆ.

ಉ) ಕ್ರಮ ತೆಗೆದುಕೊಳ್ಳಲಾಗುವುದು.

ಕೇಂದ್ರ ಉಪಾಧ್ಯಾಯರ ಸಂಘ, ಬಸವನಗುಡಿ, ಇಲ್ಲಿನ ಅವ್ಯವಹಾರ.

1092-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕಂದಾಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಉಪಾಧ್ಯಾಯರ ಸಂಘ ಡಿ.ವಿ.ಜಿ. ರಸ್ತೆ ಬೆಂಗಳೂರು, ಈ ಸಂಘದಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಂಘದವರು ಬೆಂಗಳೂರಿನ ಬನಶಂಕರಿ ದೇವಸ್ಥಾನಕ್ಕೆ ಸೇರಿದ ಸರ್ವೆ ನಂ: 63:2 ಮತ್ತು 63:3ರಲ್ಲಿ 4 ಎಕರೆ 20 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ ನಿವೇಶನಗಳನ್ನು ವಿಂಗಡಿಸಿ ಖಾಸಗಿ ಯವರಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಮತ್ತು ಈ ಅವ್ಯವಹಾರದಲ್ಲಿ ಸರ್ಕಾರೀ ನೌಕರ ಒಬ್ಬ ಶಾಮೀಲಾಗಿರುವುದು ನಿಜವೇ. ಹಾಗಿದ್ದಲ್ಲಿ ಈ ವ್ಯವಹಾರದ ವಿರುದ್ಧ ಕೈಗೊಳ್ಳಲಾಗಿರುವ ಕ್ರಮಗಳೇನು?

ಇ) ಈ ಸಂಘ ಅವ್ಯವಹಾರಗಳ ಕೂಪವಾಗಿದ್ದು ಇದರ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿ ಒಬ್ಬರನ್ನು ನೇಮಕ ಮಾಡಲು ಹಲವಾರು ಮನವಿಗಳು ಬಂದಿದ್ದರೂ, ಈವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜವೇ?

ಈ) ಈ ಸಂಘ ರಿಜಿಸ್ಟ್ರಾರ್ ಆಫ್ ಫರ್ಮ್ಸ್ ಇವರಲ್ಲಿ ನೋಂದಣಿಯಾಗಿದೆಯೇ?